ಕರ್ನಾಟಕ ಸರ್ಕಾರ

ಸಂಖ್ಯೆ: ಹೆಚ್‌ಆರ್‌ಓ/108/17-18(ಭಾಗ)

ಆಯುಕ್ತಾಲಯ,
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು
ಬೆಂಗಳೂರು-09, ದಿನಾಂಕ: 01.07.2020.

ಃ ಸುತ್ತೋಲೆ ಃ

ವಿಷಯ: ಕೋವಿಡ್-19 ತುರ್ತು ಪರಿಸ್ಥಿತಿಯ ಹಿನ್ನೆಲೆಯಲ್ಲಿ ವಯೋನಿವೃತ್ತಿ ಹೊಂದಿರುವ ಆರೋಗ್ಯ ಮತ್ತು ಕು.ಕ.ಇಲಾಖೆಗಳ ಅಧಿಕಾರಿಗಳ ಸೇವೆಯನ್ನು ವಿಸ್ತರಿಸುವ ಬಗ್ಗೆ.

ಉಲ್ಲೇಖ:
1. ಸರ್ಕಾರದ ಅಧಿಸೂಚನೆ ಸಂ. ಆಕುಕ 40 ಹೆಚ್‌ಎಸ್ ಹೆಚ್ 2020(ಭಾ), ದಿನಾಂಕಃ 02.04.2020.
2. ಸರ್ಕಾರದ ಅಧಿಸೂಚನೆ ಸಂ. ಆಕುಕ 40 ಹೆಚ್‌ಎಸ್ ಹೆಚ್ 2020(ಭಾ), ದಿನಾಂಕಃ 30.06.2020.

*****

ಉಲ್ಲೇಖ(1)ರಲ್ಲಿಯ ಕೋವಿಡ್ -19 ತುರ್ತು ಪರಿಸ್ಥಿತಿಯ ಹಿನ್ನೆಲೆಯಲ್ಲಿ ದಿನಾಂಕಃ 30.03.2020 ರಿಂದ 31.05.2020ರವರೆಗೆ ಸೇವೆಯಲ್ಲಿದ್ದು ವಯೋನಿವೃತ್ತಿ ಹೊಂದಿರುವ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಮತ್ತು ವೈದ್ಯಕೀಯ ಶಿಕ್ಷಣ ಇಲಾಖೆಗಳ ವೈದ್ಯಕೀಯ, ಅರೆ ವೈದ್ಯಕೀಯ ಪೂರಕವಾಗಿರುವ ಕ್ಲಿನಿಕಲ್ ಮತ್ತು ನಾನ್ ಕ್ಲಿನಿಕಲ್ ಸಿಬ್ಬಂದಿಗಳ ಸೇವೆಯನ್ನು 30.06.2020ರವರೆಗೆ ವಿಸ್ತರಿಸಲಾಗಿತ್ತು.

ಪ್ರಸ್ತುತ ಕೋವಿಡ್ 19ರ ಸೋಂಕು ಪ್ರಕರಣಗಳು ರಾಜ್ಯದಲ್ಲಿ ದಿನೇದಿನೇ ಹೆಚ್ಚುತ್ತಿರುವ ಹಿನ್ನೆಲೆಯಲ್ಲಿ ಸಾರ್ವಜನಿಕ ಹಿತದೃಷ್ಟಿಯಿಂದ ವೈದ್ಯಕೀಯ, ಅರೆ ವೈದ್ಯಕೀಯ ಪೂರಕವಾಗಿರುವ ಕ್ಲಿನಿಕಲ್ ಮತ್ತು ನಾನ್ ಕ್ಲಿನಿಕಲ್ ಸಿಬ್ಬಂದಿಗಳ ಸೇವೆಯನ್ನು ಅಗತ್ಯವಿರುವುದರಿಂದ ದಿನಾಂಕಃ 31.03.2020ರಿಂದ ವಯೋನಿವೃತ್ತಿ ಹೊಂದಿ ವಿಸ್ತರಿತ ಅವಧಿಯಲ್ಲಿರುವ ಮತ್ತು ದಿನಾಂಕಃ 30.06.2020ರಂದು ಮತ್ತು 30.11.2020ರವರೆಗೆ ವಯೋನಿವೃತ್ತಿ ಹೊಂದಲಿರುವ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಮತ್ತು ವೈದ್ಯಕೀಯ ಶಿಕ್ಷಣ ಇಲಾಖೆಗಳ ವೈದ್ಯಕೀಯ, ಅರೆ ವೈದ್ಯಕೀಯ ಪೂರಕವಾಗಿರುವ ಕ್ಲಿನಿಕಲ್ ಮತ್ತು ನಾನ್ ಕ್ಲಿನಿಕಲ್ ಸಿಬ್ಬಂದಿಗಳ ಸೇವೆಯನ್ನು ಉಲ್ಲೇಖ(2)ರಲ್ಲಿಯ ಅಧಿಸೂಚನೆಯಲ್ಲಿ 31.12.2020ರವರೆಗೆ ವಿಸ್ತರಿಸಲಾಗಿದೆ.

ಆದುದರಿಂದ ವಯೋನಿವೃತ್ತಿ ಹೊಂದುವ ಕ್ಲಿನಿಕಲ್ ಮತ್ತು ನಾನ್ ಕ್ಲಿನಿಕಲ್ ಅಧಿಕಾರಿ/ಸಿಬ್ಬಂದಿಯವರನ್ನು ಅವರು ವಯೋನಿವೃತ್ತಿ ಹೊಂದುವ ದಿನಾಂಕದಂದು ಸರ್ಕಾರಿ ಸೇವೆಯಿಂದ ಮತ್ತು ಕರ್ತವ್ಯದಿಂದ ಬಿಡುಗಡೆಗೊಳಿಸತಕ್ಕದ್ದು.

ಸೇವೆಯಲ್ಲಿ ಮುಂದುವರೆಯಲು ಇಚ್ಛಿಸುವ ವೈದ್ಯಕೀಯ/ಅರೆವೈದ್ಯಕೀಯ ಕ್ಲಿನಿಕಲ್ ಮತ್ತು ನಾನ್ ಕ್ಲಿನಿಕಲ್ ಅಧಿಕಾರಿ/ಸಿಬ್ಬಂದಿಯವರನ್ನು ಸಂಬಂಧಪಟ್ಟ ನಿಯಂತ್ರಣಾಧಿಕಾರಿಗಳು ಉಲ್ಲೇಖ(2)ರಲ್ಲಿಯ ಆದೇಶದಂತೆ ಮುಂದುವರೆಸುವ ಆದೇಶ ಹೊರಡಿಸುವುದು ಮತ್ತು ಕರ್ತವ್ಯಕ್ಕೆ ವರದಿ ಮಾಡಿಸಿಕೊಂಡು ಕೆಲಸವನ್ನು ನಿಗದಿಪಡಿಸತಕ್ಕದ್ದು.

ಈ ರೀತಿ ಸೇವೆಯನ್ನು ಮುಂದುವರೆಸುವ ವೈದ್ಯಕೀಯ/ಅರೆವೈದ್ಯಕೀಯ ಕ್ಲಿನಿಕಲ್ ಮತ್ತು ನಾನ್ ಕ್ಲಿನಿಕಲ್ ಅಧಿಕಾರಿ/ಸಿಬ್ಬಂದಿಯವರ ವೇತನದ ಬಗ್ಗೆ ಸರ್ಕಾರಕ್ಕೆ ಮಾರ್ಗದರ್ಶನ ಕೋರಿದ್ದು, ಸರ್ಕಾರದಿಂದ ಮಾರ್ಗದರ್ಶನ ಸ್ವೀಕೃತಗೊಂಡನಂತರ ಪ್ರತ್ಯೇಕ ಆದೇಶ ಹೊರಡಿಸಲಾಗುವುದು.

1/7/20

ಆಯುಕ್ತರು,
ಆರೋಗ್ಯ ಮತ್ತು ಕು.ಕ ಸೇವೆಗಳು,
ಬೆಂಗಳೂರು.

..........2

Scanned by CamScanner

ಪ್ರತಿಯನ್ನು ::

1. ನಿರ್ದೇಶಕರು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು ಆನಂದರಾವ್ ವೃತ್ತ, ಬೆಂಗಳೂರು.
2. ನಿರ್ದೇಶಕರು, ರಾಜ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಂಸ್ಥೆ, ಮಾಗಡಿ ರಸ್ತೆ, ಬೆಂಗಳೂರು.
3. ವಿಭಾಗೀಯ ಸಹ ನಿರ್ದೇಶಕರು, ಬೆಳಗಾವಿ/ಕಲಬುರಗಿ/ಮೈಸೂರು/ಬೆಂಗಳೂರು ವಿಭಾಗ/ಬೃಹತ್ ಬೆಂಗಳೂರು ಮಹಾನಗರಪಾಲಿಕೆ,ಬೆಂಗಳೂರು
4. ಎಲ್ಲಾ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳು/ವೈದ್ಯಕೀಯ ಅಧೀಕ್ಷಕರು/ಜಿಲ್ಲಾ ಶಸ್ತ್ರಚಿಕಿತ್ಸಕರು.

Scanned by CamScanner